(ಸದನವು 10-45 ಕ್ಕೆ ಮುಕ್ತಾಯಗೊಂಡು ಅರ್ಧ ಗಂಟೆಯ ನಂತರ ಪುನ: ಸಮಾವೇಶಗೊಳ್ಳಲು ನಿಶ್ಚಯಿಸಿತು.)

(ಸದನವು ಮಧ್ಯಾಹ್ನ 1 ಗಂಟೆ 30 ನಿಮಿಷಕ್ಕೆ ಪ್ರಾರಂಭವಾಯಿತು)

(ಸನ್ಮಾನ್ಯ ಸಭಾಧ್ಯಕ್ಷರಾದ ಶ್ರೀ ಎಂ.ಪಿ.ವೆಂಕಟಪ್ಪನವರು ಪೀಠದಲ್ಲಿ ಉಪಸ್ಥಿತರಿದ್ದರು)

(ಸದನವು ಪ್ರಾರಂಭವಾದಾಗ ಭಾರತೀಯ ಜನತಾಪಾರ್ಟಿ ಮತ್ತು ಜನತಾದಳ(ಯು) ಹಾಗೂ ಜನತಾದಳ(ಎಸ್) ಪಕ್ಷಗಳ ಸದಸ್ಯರು ಹಾಗೂ ಪಕ್ಷೇತರ ಅಭ್ಯರ್ಥಿ ಶ್ರೀ ಕೆ.ಜಯಪ್ರಕಾಶ್ ಹೆಗಡೆಯವರು ಧರಣಿ ಮಾಡಲು ಸದನದ ಬಾವಿಗೆ ಬಂದರು.)

ಅಧ್ಯಕ್ಷರು: ಮಾನ್ಯ ಜಗದೀಶ್ ಶೆಟ್ಟರ್ ಮತ್ತು ಮಾನ್ಯ ಸಿಂಧ್ಯಾರವರು, ಈ ವಿಷಯಕ್ಕೆ ಸಂಬಂಧಪಟ್ಟಂತೆ ಏನಾದರೂ ಹೇಳುವುದಾದರೆ ಹೇಳಬಹುದು.

(ಈ ಹಂತದಲ್ಲಿ ಶ್ರೀ ಜಗದೀಶ್ ಶೆಟ್ಟರ್ ಮತ್ತು ಶ್ರೀ ಪಿ.ಜಿ.ಆರ್.ಸಿಂಧ್ಯಾರವರು ಮಾತನಾಡಲು ಸದನದ ಬಾವಿಯಿಂದ ತಮ್ಮ ಸ್ಥಾನಕ್ಕೆ ತೆರಳಿದರು.)

+ ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು): ಸನ್ಮಾನ್ಯ ಅಧ್ಯಕ್ಷರೆ, ಬೆಳಿಗ್ಗೆಯಿಂದ ಈ ವಿಷಯಕ್ಕೆ ಸಂಬಂಧಪಟ್ಟಂತೆ ತಮ್ಮ ಛೇಂಬರ್‌ನಲ್ಲಿ ಸಾಕಷ್ಟು ಚರ್ಚೆ ಆಯಿತು. ಆದರೆ, ಸದರಿ ಚರ್ಚೆಯಿಂದ ಯಾವುದೇ ರೀತಿಯ ಫಲಶೃತಿ ಮಾತ್ರ ಸಿಗಲಿಲ್ಲ. ಮತ್ತೆ ಕೆಲವೊಂದು ಹೇಳಿಕೆಗಳನ್ನು ಈಗ ಸರ್ಕಾರದವರು ಕೊಡುತ್ತೇವೆಂದು ಹೇಳಿದ್ದಾರೆ. ಇವತ್ತಿನ ದಿವಸ ಬರಗಾಲದಿಂದ ನಮ್ಮ ರಾಜ್ಯದ ರೈತರು ಬಹಳ ಸಂಕಷ್ಟದ ಪರಿಸ್ಥಿತಿಯಲ್ಲಿದ್ದಾರೆ. ಬರಗಾಲ ಪರಿಸ್ಥಿತಿಯನ್ನು ಎದುರಿಸಲು ಅನೇಕ ಕಾಮಗಾರಿಗಳನ್ನು ಕೈಗೊಳ್ಳುತ್ತೇವೆಂದು ಸರ್ಕಾರದವರು ಹೇಳುತ್ತಿದ್ದಾರೆ. ಈ ಕೆಲಸ ಈಗಾಗಲೇ ತೀವ್ರಗತಿಯಲ್ಲಿ ಪ್ರಾರಂಭವಾಗಬೇಕಾಗಿತ್ತು. ಆದರೆ, ಇದುವರೆಗೂ ಪ್ರಾರಂಭವಾಗಿಲ್ಲ. ಇದರಿಂದ, ಜಾನುವಾರುಗಳು ಕಸಾಯಿಖಾನೆಗೆ ಹೋಗುತ್ತಿರುವುದು ಮತ್ತು ರೈತರು ಮಹಾರಾಷ್ಟ್ರ ರಾಜ್ಯ ಮತ್ತು ಇತರೇ ಭಾಗಗಳಿಗೆ ವಲಸೆ ಹೋಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಇವರಿಗೊಂದು ಕೆಲಸ ಕೊಟ್ಟು ವಲಸೆ ಹೋಗುವುದನ್ನು ತಡೆಯುವುದಕ್ಕೆ ನಿಮ್ಮ ಅಧಿಕಾರಿಗಳಿಂದ ಆಗಿಲ್ಲ. ಇವತ್ತಿನ ದಿವಸ ರೈತ ಮಾಡಿರತಕ್ಕಂಥ ಸಾಲದ ಹಣ ಮತ್ತು ಇದರ ಮೇಲಿನ ಬಡ್ಡಿ ಹಣವನ್ನುತುಂಬಲಾರದಂಥ ಪರಿಸ್ಥಿತಿಯಲ್ಲಿ ರೈತ ಇದ್ದಾನೆ. ಆದ್ದರಿಂದ, ಈ ಸಂದರ್ಭದಲ್ಲಿ ಬಡ್ಡಿ ಹಣವನ್ನು ಮನ್ನಾ ಮಾಡಬೇಕೆಂಬುದು ನಮ್ಮ ಪ್ರಮುಖ ಬೇಡಿಕೆಯಾಗಿದೆ. ರೈತರು ತೆಗೆದುಕೊಂಡಿರತಕ್ಕಂಥ ಸಾಲದ ಮೇಲಿನ ಬಡ್ಡಿಯನ್ನು ಮನ್ನಾ ಮಾಡುವುದರಿಂದ ಸರ್ಕಾರಕ್ಕೆ ಹೆಚ್ಚಿನ ಹೊರೆ ಏನು ಆಗುವುದಿಲ್ಲ. ಏಕೆಂದರೆ,

ಈಗಾಗಲೇ ಸಾಕಷ್ಟು ರೆಕವರಿ ಆಗಿದೆಯೆಂದು ಚರ್ಚೆ ಸಂದರ್ಭದಲ್ಲಿ ಸರ್ಕಾರದವರು ಹೇಳಿದ್ದಾರೆ. ಆದರೆ, ಬಾಕಿ ಎಷ್ಟು ಉಳಿದಿದೆ ಎನ್ನತಕ್ಕಂಥ ಲೆಕ್ಕ ಕೊಡುವುದಕ್ಕೆ ಸರ್ಕಾರದವರು ತಯಾರಿಲ್ಲ. ಇವತ್ತಿನ ದಿವಸ ಬಡ್ಡಿ ಮನ್ನಾ ಮಾಡುವುದರಿಂದ ಸುಮಾರು 150,200 ಅಥವಾ 400 ಕೋಟಿ ರೂಪಾಯಿಗಳಷ್ಟು ಬರ್ಡನ್ ಆಗುತ್ತದೆಯೆ? ಇವತ್ತಿನ ದಿವಸ ರೈತ ಸಂಕಷ್ಟದಲ್ಲಿರುವಾಗ ಆತ ಮಾಡಿರತಕ್ಕಂಥ ಸಾಲದ ಹಣ ಮತ್ತು ಬಡ್ಡಿಯನ್ನು ಪಾವತಿ ಮಾಡುವುದಕ್ಕೆ ಕಷ್ಟವಾಗುತ್ತದೆ. ಇಂಥ ಸಂದರ್ಭದಲ್ಲಿ ಬಡ್ಡಿ ಮನ್ನಾ ಮಾಡಿದರೆ ರೈತನ ಮುಂದಿನ ಜೀವನಕ್ಕೆ ಮನೋಸ್ಥೈರ್ಯ ತುಂಬುವುದಕ್ಕೆ ಸಾಧ್ಯವಾಗುತ್ತದೆ. ಇಂಥ ಸನ್ನಿವೇಶಗಳಲ್ಲಿ ಹಿಂದೆ ಇದ್ದಂಥ ಸರ್ಕಾರಗಳು ಬಡ್ಡಿ ಮನ್ನಾ ಮಾಡಿರತಕ್ಕಂಥ ಉದಾಹರಣೆಗಳಿವೆ. ಆದರೆ ಇವತ್ತಿನ ದಿವಸ ರೈತನಿಗೆ ಮನೋಸ್ಥೈರ್ಯ ತುಂಬುವುದಕ್ಕೆ ಈ ಸರ್ಕಾರದವರಿಂದ ಆಗುವುದಿಲ್ಲ ಎಂದರೆ ಇದಕ್ಕಿಂತ ನಾಚಿಕೆಗೇಡಿನ ವಿಷಯ ಬೇರೊಂದು ಇಲ್ಲ. ಈಗಾಗಲೇ ಸಾಕಷ್ಟು ರೈತನ ಆತ್ಮಹತ್ಯೆ ಪ್ರಕರಣಗಳು ನಡೆದಿವೆ. ಇಂಥ ಪ್ರಕರಣಗಳು ಮುಂದುವರಿಯಬೇಕೆಂದು ತಾವು ಆಸೆಪಡುತ್ತೀರಾ? ನಾಲ್ಕೈದು ವರ್ಷಗಳಿಗೊಮ್ಮೆ ಈ ರೀತಿಯಾದಂಥ ಕೆಲವು ಧೃಢ ನಿರ್ಧಾರವನ್ನು ಸರ್ಕಾರ ಕೈಗೊಳ್ಳಬೇಕಾಗುತ್ತದೆ. ಇವತ್ತಿನ ದಿವಸ ಅಬ್ಕಾರಿ ಇಲಾಖೆ ಮತ್ತು ಇತರೇ ಇಲಾಖೆಗಳಿಂದ ಸಾವಿರಾರು ಕೋಟಿ ರೂಪಾಯಿಗಳಷ್ಟು ಸೋರಿ ಹೋಗುತ್ತಿದೆ ಎಂದು ನಾನು ಹೇಳುತ್ತಿಲ್ಲ. ಹಿಂದೆ ನಮ್ಮ ರಾಜ್ಯದ ಮುಖ್ಯಮಂತ್ರಿಯಾಗಿದ್ದಂಥ ಸನ್ಮಾನ್ಯ ವೀರಪ್ಪಮೊಯಿಲಿಯವರು ಹೇಳಿದ್ದಾರೆ. ಇದನ್ನು ತಡೆಗಟ್ಟುವುದಕ್ಕೆ ನಿಮ್ಮ ಕೈಯಿಂದ ಆಗಿಲ್ಲ. ಆದರೆ, ಸಾರಾಯಿ ದೊರೆಗಳು ಕೊಡಬೇಕಾಗಿರತಕ್ಕಂಥ ಸುಮಾರು 250 ಕೋಟಿ ರೂಪಾಯಿ ಬಡ್ಡಿಯನ್ನು ಮನ್ನಾ ಮಾಡುತ್ತಿದ್ದೀರಿ. ಆದರೆ, ಇಂಥ ಸಂದರ್ಭದಲ್ಲಿ ರೈತರು ಕೊಡಬೇಕಾಗಿರತಕ್ಕಂಥ ಬಡ್ಡಿಯನ್ನು ಮನ್ನಾ ಮಾಡಿ ಎಂದರೆ, ಇದನ್ನು ಮಾಡುವುದಕ್ಕೂ ತಾವು ತಯಾರಿಲ್ಲ. ಹಾಗೆಯೇ ಬಡ್ಡಿ ಮನ್ನಾ ಮಾಡುವುದರಿಂದ ಸರ್ಕಾರಕ್ಕೆ ಎಷ್ಟು ಬರ್ಡನ್ ಆಗುತ್ತದೆ ಎಂಬುದರ ಬಗ್ಗೆ ಅಂಕಿ - ಅಂಶ ಕೊಡುವುದಕ್ಕೂ ತಾವು ತಯಾರಿಲ್ಲ. ಬಡ್ಡಿ ಮನ್ನಾ ಮಾಡಿ ಎನ್ನತಕ್ಕಂಥ ನಮ್ಮ ಬೇಡಿಕೆಯನ್ನು ಯಾವ ಆಧಾರದ ಮೇಲೆ ರಿಜೆಕ್ಟ್ ಮಾಡುತ್ತಿದ್ದೀರಿ ಎನ್ನತಕ್ಕಂಥ ಪ್ರಶ್ನೆಗೆ ಉತ್ತರ ಬೇಕಾಗಿದೆ. ಇವತ್ತಿನ ದಿವಸ ರೈತನಿಗೆ ಭೂತ ಬೆನ್ನು ಹತ್ತಿದ ಹಾಗೆ ಅಧಿಕಾರಿಗಳು ರೈತನ ಮನೆಗೆ ಹೋಗಿ ಸಾಲ ವಸೂಲು ಮಾಡತಕ್ಕಂಥ ಕೆಲಸವನ್ನು ಮಾಡುತ್ತಿದ್ದಾರೆ. ಹಾಗೆಯೇ ರೈತನ ಮನೆ ಜಪ್ತಿ ಮಾಡತಕ್ಕಂಥ ಕೆಲಸವನ್ನು ಮಾಡುತ್ತಿದ್ದಾರೆ. ಇದರಿಂದ ರೈತ ಮನೆಯಲ್ಲಿ ಇರುವುದಕ್ಕೆ ಆಗದೇ ಇರತಕ್ಕಂಥ ಪರಿಸ್ಥಿತಿ ಬಂದಿದೆ. ಇವತ್ತಿನ ದಿವಸ ಸಾಲ ವಸೂಲಾತಿ ಕಾರ್ಯವನ್ನು ಮತ್ತು ಅಲ್ಪಾವಧಿ ಸಾಲವನ್ನು ದೀರ್ಘಾವಧಿ ಸಾಲವನ್ನಾಗಿ ಪರಿವರ್ತನೆ ಮಾಡುತ್ತೇವೆ ಎನ್ನತಕ್ಕಂಥ ಆದೇಶವನ್ನು ತಕ್ಷಣ ನೀಡಬೇಕು. ಇದರಿಂದ ಸಾಕಷ್ಟು ಜನರಿಗೆ ಅನುಕೂಲವಾಗುತ್ತದೆ. ಆದರೆ, ಈ ಒಂದು ಕಾರ್ಯವನ್ನು ಮಾಡುವುದಕ್ಕೆ ನೀವು ತಯಾರಿಲ್ಲ. ಹಾಗೆಯೇ ಇವತ್ತಿನದಿವಸ ರೈತರ ಪಂಪ್‌ಸೆಟ್‌ಗಳಿಗೆ ವಿದ್ಯುತ್

ಕಡಿತ ಮಾಡುವುದಕ್ಕೆ ತಿಳಿಸಿದ್ದೀರಿ. ಇದೂ ಸಹ ಸರಿಯಲ್ಲ. ರೈತರ ಅನುಕೂಲಕ್ಕೋಸ್ಕರ ಕೆಲವು ಪ್ರಮುಖ ಬೇಡಿಕೆಗಳನ್ನು ಈಡೇರಿಸಬೇಕೆಂದು ನಾವು ಈಗಾಗಲೇ ಧರಣಿ ಮಾಡುತ್ತಿದ್ದೇವೆ. ಈ ವಿಷಯದ ಬಗ್ಗೆ ಇವರಿಗೆ ಜ್ಞಾನೋದಯ ಆಗಿದ್ದರೆ, ಈ ಒಂದು ಬೇಡಿಕೆಗಳನ್ನು ಒಪ್ಪಿಕೊಳ್ಳಬೇಕಾಗಿತ್ತು. ರೈತರಿಗೆ ಒಂದು ಒಳ್ಳೆಯ ಕೆಲಸವನ್ನು ಮಾಡತಕ್ಕಂಥ ಸದವಕಾಶವನ್ನು ಈ ಸರ್ಕಾರ ಕಳೆದುಕೊಳ್ಳುತ್ತಿದೆ. ತತ್ಕಾಲ್ ಯೋಜನೆಯಡಿಯಲ್ಲಿ 25 ಸಾವಿರ ರೂಪಾಯಿ ಕೊಟ್ಟರೆ ರೈತರ ಪಂಪ್‌ಸೆಟ್‌ಗಳಿಗೆ ವಿದ್ಯುತ್‌ನ್ನು ಕನೆಕ್ಷನ್ ಕೊಡುತ್ತೇವೆ ಎನ್ನತಕ್ಕಂಥದ್ದನ್ನು ತಕ್ಷಣ ಕೈಬಿಡಬೇಕು. ಇವತ್ತಿನ ದಿವಸ ಕಪ್ಪು ಮತ್ತು ಬೂದು ಏರಿಯಾಗಳನ್ನು ಗುರುತು ಮಾಡಿ ರೈತನಿಗೆ ತೊಂದರೆ ಮಾಡುತ್ತಿದ್ದೀರಿ. ಇದರಿಂದ ಅನಾನುಕೂಲವಾಗುತ್ತದೆ. ಆದ್ದರಿಂದ ಇವೆಲ್ಲವನ್ನು ಕೈಬಿಡಬೇಕು. ತತ್ಕಾಲ್ ಯೋಜನೆಯಡಿಯಲ್ಲಿ 25 ಸಾವಿರ ರೂಪಾಯಿ ತುಂಬುವುದಕ್ಕೂ ಸಹ ಇವತ್ತಿನ ಪರಿಸ್ಥಿತಿಯಲ್ಲಿ ರೈತನಿಗೆ ಹೇಗೆ ಸಾಧ್ಯವಾಗುತ್ತದೆ? ಹಾಗೆಯೇ ಈ ಒಂದು ಯೋಜನೆಯಿಂದ ಯಾವ ರೈತನಿಗೂ ಸಹ ಅನುಕೂಲವಾಗುತ್ತಿಲ್ಲ. ಸನ್ಮಾನ್ಯ ಸಭಾಧ್ಯಕ್ಷರು ಕೂಡ ರೈತರ ಪರವಾಗಿ ಅನೇಕ ವಿಚಾರಗಳ ಬಗ್ಗೆ ಸ್ಪಂದನೆ ಮಾಡಿ, ಇದಕ್ಕೆ ಸಂಬಂಧಪಟ್ಟಂತೆ ಸಾಕಷ್ಟು ಪುಷ್ಟಿದಾಯಕವಾದಂಥ ವಿಚಾರಗಳನ್ನು ಸರ್ಕಾರಕ್ಕೆ ಹೇಳಿದ್ದಾರೆ. ಇವತ್ತಿನ ದಿವಸ ರೈತರ ಪರವಾಗಿ ಸರ್ಕಾರಕ್ಕೆ ಏನಾದರೂ ಕಾಳಜಿ ಇದ್ದರೆ, ಈ ಸಂದರ್ಭದಲ್ಲಿ ರೈತನಿಗೆ ಅನುಕೂಲ ಆಗುವಂತಹ ಹೇಳಿಕೆಯನ್ನು ಮತ್ತು ಕೆಲವೊಂದು ಘೋಷಣೆಯನ್ನು ಮಾಡುತ್ತಾರೆ ಎನ್ನತಕ್ಕಂಥ ವಿಶ್ವಾಸವನ್ನು ನಾನು ಇಟ್ಟುಕೊಂಡಿದ್ದೇನೆ. ಒಂದು ವೇಳೆ ಇದನ್ನು ಇವರು ಮಾಡದೇ ಹೋದರೆ ಈ ಸರ್ಕಾರಕ್ಕೆ ರೈತ ಖಂಡಿತವಾಗಿ ಶಾಪ ಹಾಕುತ್ತಾನೆ. ಹಾಗೆಯೇ ಇವರನ್ನು ಕ್ಷಮಿಸುವುದಿಲ್ಲವೆಂದು ಹೇಳುತ್ತಾ, ಇದರ ಬಗ್ಗೆ ಸರ್ಕಾರದವರು ಏನಾದರೂ ಒಂದು ಹೇಳಿಕೆಯನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

+ಶ್ರೀ ಪಿ.ಜಿ.ಆರ್.ಸಿಂಧ್ಯ(ಕನಕಪುರ): ಸನ್ಮಾನ್ಯ ಅಧ್ಯಕ್ಷರೆ, ನಾವು ವಿರೋಧ ಪಕ್ಷದ ನಾಯಕರು, ಏಕೆ ಧರಣಿ ಮಾಡುತ್ತಿದ್ದೇವೆ ಎನ್ನುವುದರ ಬಗ್ಗೆ ಹಾಗೂ ನಮ್ಮ ಬೇಡಿಕೆಗಳು ಏನು ಎನ್ನುವುದರ ಬಗ್ಗೆ ಅವರು ಸ್ಪಷ್ಟವಾಗಿ ತಿಳಿಸಿರುತ್ತಾರೆ. ಬಹಳ ಮುಖ್ಯವಾಗಿ, ನಾವು ನಮ್ಮ ಬೇಡಿಕೆಯಲ್ಲಿ ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರ ಕಳುಹಿಸಿರುವ ಮನವಿ ಪತ್ರ ಏನಿದೆ, ಅದರಲ್ಲಿ ಅಂಕಿಅಂಶಗಳ ಬಗ್ಗೆ ವಾಸ್ತವಾಂಶವನ್ನು ಅದು ಬಿಂಬಿಸುವುದಿಲ್ಲ, ಇದು ನಮ್ಮ ಮೊದಲನೆ ಆಪಾದನೆಯಾಗಿದೆ. ಇವತ್ತು ಬರಗಾಲ ಬಹಳ ಭೀಕರವಾಗಿದೆ, ಆ ವಸ್ತುಸ್ಥಿತಿಯನ್ನು ಪ್ರತಿಬಿಂಬಿಸತಕ್ಕಂಥ ಒಂದು ಸ್ಥಿತಿಯನ್ನು ಕೇಂದ್ರ ಸರ್ಕಾರಕ್ಕೆ ಇವರು ತರಬೇಕು ಅದು ಆಗಿರುವುದಿಲ್ಲ. ಮಾನ್ಯ ಮಂತ್ರಿಗಳು, ರೈತರ ಸಹಕಾರ ಸಂಘದ ಸಾಲದ ಮೇಲಿನ ಬಡ್ಡಿ ಮನ್ನಾ ಮಾಡುವ ವಿಚಾರ ಏನಿದೆ; ಇವರು ಈಗ ಏನು ಹೇಳಿದ್ದಾರೆಂದರೆ, ಹಿಂದಿನ ಜನತಾದಳ

ಸರ್ಕಾರದವರು ಬರವಣಿಗೆಯಲ್ಲಿ ನಬಾರ್ಡ್‌ಗೆ ಮನವಿಯನ್ನು ಕೊಟ್ಟಿದ್ದರು. ಆ ತರಹ ನಾವು ಇದನ್ನು ಮಾಡುವುದಿಲ್ಲ, ಸಾಲದ ಬಡ್ಡಿ ಮನ್ನಾ ಮಾಡಿ, ನಾವು ಒಂದು ದೊಡ್ಡ ಅಪರಾಧವನ್ನು ಮಾಡಿಬಿಟ್ಟಿದ್ದೇವೆ, ನಾವು ಮಾಡುವುದಿಲ್ಲವೆನ್ನತಕ್ಕಂಥದ್ದನ್ನು ಇವರು ಹೇಳಿದ್ದಾರೆ. ನಾನು ಸರ್ಕಾರವನ್ನು ಈ ಸಂದರ್ಭದಲ್ಲಿ ಆಗ್ರಹ ಮಾಡುತ್ತೇನೆ. ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ, ನಾವು ಮೂರು ಸಲ ಬಡ್ಡಿಯನ್ನು ಮನ್ನಾ ಮಾಡಿದ್ದೇವೆ. ನಾವು ನಬಾರ್ಡ್ ಜೊತೆಯಲ್ಲಿ ಕಾಗದ ಪತ್ರಗಳ ವ್ಯವಹಾರವನ್ನು ಮಾಡಿದ್ದೇವೆ, ಅದನ್ನು ಈ ಸದನದ ಮುಂದೆ ಇಡಿ. ಸತ್ಯಾಂಶ ಹೊರಗಡೆ ಬರಲಿ. ನೀವು ನಿಜವಾಗಿ ರೈತರಿಗೆ ಸಹಾಯ ಮಾಡಬೇಕೆಂದು ಇದ್ದರೆ, ನೀವು ಎಲ್ಲಾ ಕಾರ್ಯಕ್ರಮಗಳನ್ನು ನಿಲ್ಲಿಸಿ, ಆ ಸಾಲದ ಮೇಲಿನ ಬಡ್ಡಿಯನ್ನು ಸಂಪೂರ್ಣವಾಗಿ ಮನ್ನಾ ಮಾಡಬೇಕೆನ್ನುವುದು ನಮ್ಮದು ಮೊದಲನೇ ಬೇಡಿಕೆ, ಇದು ಬಹಳ ಪ್ರಮುಖವಾದ ಬೇಡಿಕೆಯಾಗಿದೆ. ತಾತ್ಕಾಲಿಕ ಯೋಜನೆಯನ್ನು ತಕ್ಷಣ ಕೈಬಿಡುವುದು ಅಷ್ಟೇ ಅಲ್ಲ, ಡಿಸ್‌ಕನೆಕ್ಷನ್ ಡ್ರೈವ್ ಏನಿದೆ, ರೈತರು ಯಾವುದೇ ಪರಿಸ್ಥಿತಿಯಲ್ಲಿ ಆ ಬಿಲ್‌ನ್ನು ಕಟ್ಟತಕ್ಕಂಥ ಸ್ಥಿತಿಯಲ್ಲಿಲ್ಲ. ಅವರು ಸಾಲವನ್ನು ಕಟ್ಟತಕ್ಕಂಥ ಸ್ಥಿತಿಯಲ್ಲಿಲ್ಲ. ಒಂದು ವರ್ಷ ಮುಂದಕ್ಕೆ ಹಾಕಿ, ನಿಮಗೆ ಸುಮಾರು 300 -400 ಕೋಟಿ ರೂಪಾಯಿಗಳು ಬರುವುದು ಏನಿದೆ, ಅದು ನಿಧಾನವಾಗಬಹುದು, ಆದರೆ ಅದನ್ನು ನಿಲ್ಲಿಸಬೇಕು ಎನ್ನುವುದು ನಮ್ಮ ಆಗ್ರಹವಾಗಿದೆ. ಸದನದ ಕಾರ್ಯಕಲಾಪಗಳು ಸದನದ ಪಟ್ಟಿಯ ಪ್ರಕಾರ ನಡೆಯಬೇಕು ಎನ್ನುವುದು ನಮಗೆ ಆಶೆ ಇದ್ದರೂ ಸಹ ನಮಗೆ ಮನಸ್ಸಿಲ್ಲ. ಡಾರ್ಕ್, ಗ್ರೇ ಏರಿಯಾ ಬಗ್ಗೆ ಅವರು ಮಾತನಾಡುವ ಸಂದರ್ಭದಲ್ಲಿ ಹೇಳಿದರು 4-5 ವರ್ಷಗಳಿಂದ ಅಲ್ಲಿ ನೀರು ಇರಲಿಲ್ಲ. ಈಗ ಅಲ್ಲಿ 4-5 ಸಾವಿರ ಗ್ಯಾಲನ್ ನೀರು ಬಿದ್ದಿದೆ. ಅಲ್ಲಿ ಇವರು ಏಕೆ ಕನೆಕ್ಷನ್ ಕೊಡಬಾರದು. ಕನೆಕ್ಷನ್ ಕೊಟ್ಟರೆ ತಪ್ಪು ಏನಾಗುತ್ತದೆ. ಭೂಮಿಯಲ್ಲಿ ಬಹಳಷ್ಟು ಬದಲಾವಣೆಗಳು ಆಗುತ್ತಿರುತ್ತವೆ. ಡಿಪಿಎಪಿ ಪ್ರೋಗ್ರಾಮ್‌ನಿಂದ ನೀರು ರೀಚಾರ್ಜ್ ಆಗಿರುವಂಥ ಸನ್ನಿವೇಶವಿದೆ. ಕೆಪಿಟಿಸಿಎಲ್ ನವರು ಡಾರ್ಕ್ ಏರಿಯಾ, ಗ್ರೇ ಏರಿಯಾ ವನ್ನು ಸೈಂಟಿಫಿಕ್ಕಾಗಿ ಮಾಡಿದ್ದಾರೆಂದು ನಮಗೆ ಏನು ಅನಿಸುವುದಿಲ್ಲ. ಎಲ್ಲಿ ನೀರು ಬರುತ್ತದೆ ಅಲ್ಲಿ ವಿದ್ಯುತ್ ಕನೆಕ್ಷನ್ ಕೊಡುವುದಕ್ಕೆ ಸರ್ಕಾರ ನಿರ್ಧಾರವನ್ನು ಮಾಡಬೇಕು. ಇದು ನಮ್ಮ ಪ್ರಮುಖವಾದ ಬೇಡಿಕೆಯಾಗಿದೆ. ಇದನ್ನು ಸರ್ಕಾರ ತತ್‌ಕ್ಷಣ ಮಾಡದೇ ಹೋದರೆ, ನಮಗೆ ಧರಣಿ ಮಾಡಬೇಕೆಂದು ಮನಸ್ಸಿಲ್ಲದಿದ್ದರೂ ಅನಿವಾರ್ಯವಾಗಿ ನಾವು ಇವತ್ತು ಧರಣಿ ಕುಳಿತಿದ್ದೇವೆ. ಇವತ್ತು ನಾನು ನಿಮಗೆ ಅಭಿನಂದಿಸುತ್ತೇನೆ. ಏಕೆಂದರೆ, ಇವತ್ತು ತಾವು ಆಸಕ್ತಿಯನ್ನು ವಹಿಸಿ, ಈ ಸಮಸ್ಯೆಯನ್ನು ಬಗೆಹರಿಸಬೇಕೆಂದು ಹೇಳಿ ಸರ್ಕಾರದಿಂದ ನಾವು ಬಹಳ ದೊಡ್ಡದನ್ನು ಅಪೇಕ್ಷೆ ಮಾಡಿದ್ದವು. ನಮಗೆ ಅವರಿಂದ ಬಹಳ ನಿರಾಶೆಯಾಗಿದೆ. ಈಗಲಾದರೂ ಸರ್ಕಾರ ಎರಿತು ಎಚ್ಚೆತ್ತುಕೊಂಡು, ಈ ಬೇಡಿಕೆಗಳನ್ನು ಪೂರೈಸಬೇಕೆಂದು ನಾನು ಆಗ್ರಹವನ್ನು ಮಾಡುತ್ತೇನೆ.

+ ಶ್ರೀ ಡಿ.ಬಿ.ಚಂದ್ರೇಗೌಡ(ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಈಗಾಗಲೇ ತಮ್ಮ ಕೋಡಿಯಲ್ಲಿ ಅನೇಕ ವಿಚಾರಗಳನ್ನು ಚರ್ಚೆ ಮಾಡಿದ್ದೇವೆ. ಸುಮಾರು ಒಂದೂವರೆ ಗಂಟೆಗಳ ಕಾಲ ಮಾನ್ಯ ಮುಖ್ಯ ಮಂತ್ರಿಗಳ ಹಾಗೂ ಮಾನ್ಯ ಹಿರಿಯ ಸಚಿವರು ಕೂಲಂಕುಷವಾಗಿ ಅನೇಕ ಸಲಹೆ ಸೂಚನೆಗಳ ಬಗ್ಗೆ ಚರ್ಚೆಯನ್ನು ಮಾಡಿರುತ್ತೇವೆ. ನಿನ್ನೆ ಸೇರಿದ ಸಚಿವ ಸಂಪುಟ ಕೂಡ, ಈ ಸದನದಲ್ಲಿ ಪ್ರಸ್ತಾಪವಾದ ಅನೇಕ ವಿಚಾರಗಳ ಬಗ್ಗೆ ಸುದೀರ್ಘವಾಗಿ ಪ್ರತಿಪಕ್ಷದ ನಾಯಕರು ಕೊಟ್ಟಿರುವ ಅನೇಕ ಸಲಹೆ ಸೂಚನೆಗಳ ಬಗ್ಗೆ ಚರ್ಚೆ ಮಾಡಲಾಗಿದೆ. ನಾವು ತಕ್ಷಣ ಬರಗಾಲವನ್ನು ಎದುರಿಸಬೇಕೆಂದು, ರಾಜ್ಯಸರ್ಕಾರ ತೆಗೆದುಕೊಂಡಿರತಕ್ಕಂಥ ಅನೇಕ ಕ್ರಮಗಳನ್ನು ಹಾಗೂ ನಿರ್ಣಯಗಳನ್ನು ಆ ನಿರ್ಣಯಗಳನ್ನು ಜಾರಿಗೊಳಿಸತಕ್ಕಂಥ ಆಡಳಿತ ವ್ಯವಸ್ಥೆಯನ್ನು ರೂಪಿಸುವುದಕ್ಕಾಗಿ ಸುಮಾರು 15 ಅಂಶಗಳ ಕಾರ್ಯಕ್ರಮವನ್ನು, ಸರ್ಕಾರದಿಂದ ಈಗ ಸದನಕ್ಕೆ ತಮ್ಮ ಮೂಲಕ ನಾನು ಕೊಡುವುದಕ್ಕೆ ಇಚ್ಛಿಪಡುತ್ತೇನೆ. ಬಹಳ ವಿಶೇಷವಾಗಿ ಚರ್ಚೆಯಾಗಿದ್ದು, ವಿದ್ಯುತ್‌ಚ್ಛಕ್ತಿಯ ಒಂದು ತತ್ಕಾಲ ಯೋಜನೆ. ಸುಮಾರು 25 ಸಾವಿರ ರೂಪಾಯಿಗಳನ್ನು ಕೊಟ್ಟರೆ ಮೊದಲು ಅವರಿಗೆ ವಿದ್ಯುತ್ ಕೊಡತಕ್ಕಂಥದ್ದು, ಬಾಕಿಯವರು ಸರದಿಯಲ್ಲಿ ನಿಲ್ಲತಕ್ಕಂಥದ್ದು, ಇದರಿಂದ ಶ್ರೀಮಂತರಿಗೆ ಬಹಳ ದೊಡ್ಡದಾದ ಒಂದು ಸಹಾಯವನ್ನು ಸರ್ಕಾರ ಮಾಡಿದೆ ಎನ್ನುವಂಥದ್ದಾಗಿದೆ. ಎಲ್ಲರಿಗೂ ಸರ್ಕಾರ 25 ಸಾವಿರ ರೂಪಾಯಿಗಳನ್ನು ಹಾಕಿದೆ ಎನ್ನುವುದು ಒಂದು ಶಂಕೆ ರಾಜ್ಯದ ಉದ್ದಗಲಕ್ಕೂ ಬಂದಿರುವುದರಿಂದ ಮಂತ್ರಿಮಂಡಲ, ತತ್‌ಕಾಲ ಯೋಜನೆಯನ್ನು ತಕ್ಷಣ ತಿರಸ್ಕರಿಸತಕ್ಕಂಥದ್ದು, ಇನ್ನು ಮುಂದೆ ಆ ಯೋಜನೆಯನ್ನು ಜಾರಿಯಲ್ಲಿ ತರತಕ್ಕದ್ದಲ್ಲ ಎನ್ನುವ ಒಂದು ಪ್ರಮುಖವಾದ ನಿರ್ಣಯವನ್ನು ತೆಗೆದುಕೊಂಡಿರುತ್ತೇವೆ. ಸಮಸ್ಯೆಯನ್ನು ಹೇಗೆ ಎದುರಿಸಬೇಕು. ಬಹಳ ಮುಖ್ಯವಾದವುಗಳು ಮೂರು ಅಂಶಗಳು, ಕುಡಿಯುವ ನೀರಿನ ಯೋಜನೆ, ಉದ್ಯೋಗ ಹಾಗೂ ಮೇವನ್ನು ಒದಗಿಸುವುದಕ್ಕೆ ಬ್ಯಾಂಕ್ ತೆರೆಯುವುದು. ಬರಗಾಲ ಪೀಡಿತ ಪ್ರದೇಶದಲ್ಲಿ ನೀರಾವರಿ ಹಾಗೂ ಜಲಾನಯನ ಪ್ರದೇಶಗಳಲ್ಲಿ ಬಜೆಟ್‌ನಲ್ಲಿ ಮಾಡಲಾದ ಎಲ್ಲಾ ಕಾರ್ಯಕ್ರಮಗಳನ್ನು ಕೂಡಲೇ ತೆಗೆದುಕೊಳ್ಳಬೇಕು ಎನ್ನುವ ನಿರ್ಣಯವನ್ನು ಮಾಡಿದ್ದೇವೆ. ತಡವಾಗಿ ಮಳೆ ಬಂದಿರುವುದರಿಂದ ಬೆಳೆಯಲ್ಲಿ ಬದಲಾವಣೆ ಅವಶ್ಯವಾಗಿದ್ದಲ್ಲಿ ಕೃಷಿ ಇಲಾಖೆಯು ಲಭ್ಯವಿರುವ ಬೀಜ ಹಾಗೂ ಇನ್ನಿತರ ಪರಿಕರಗಳನ್ನು ಒದಗಿಸುವ ನಿರ್ಣಯವನ್ನು ಮಾಡಲಾಗಿದೆ. ಜಿಲ್ಲಾಧಿಕಾರಿಗಳು ಬರಗಾಲ ಕಾರ್ಯಕ್ರಮದ ಸಂಪೂರ್ಣವಾದ ಮೇಲ್ವಿಚಾರಣೆಯನ್ನು ವಹಿಸತಕ್ಕದ್ದು ಇತರ ಎಲ್ಲಾ ಮಟ್ಟದ ಅಧಿಕಾರಿಗಳು ಜಿಲ್ಲಾಧಿಕಾರಿಗಳ ಜೊತೆಯಲ್ಲಿ ಚರ್ಚೆಯನ್ನು ಮಾಡಿ ಜೊತೆಯಲ್ಲಿ ಕಾರ್ಯನಿರ್ವಹಿಸಬೇಕು. ಪ್ರತಿಯೊಬ್ಬ ಜಿಲ್ಲಾಧಿಕಾರಿಯು ಪ್ರಕೃತಿ ವಿಕೋಪಕ್ಕೆ ಸಿಆರ್‌ಎಫ್ ಹಾಗೂ ಇಲಾಖಾ ಕಾರ್ಯಕ್ರಮಗಳ ಅಡಿಯಲ್ಲಿ ಕಾರ್ಯಕ್ರಮವೆಂದು ಪರಿಗಣಿಸಿ ಪ್ರತಿ ಜಿಲ್ಲೆಗೆ ಕ್ರಿಯಾ ಯೋಜನೆಯನ್ನು

ಸಿದ್ಧಪಡಿಸಬೇಕು. ರಾಜ್ಯದ ಹೊರಗಡೆಗೆ ಮೇವು ಸಾಗಾಣಿಕೆಯನ್ನು ಪ್ರತಿಬಂಧಿಸುವುದು. ರೈತರಿಂದ ಮೇವನ್ನು ಖರೀದಿಸಲು ಮತ್ತು ಮೇವನ್ನು ವಿಶೇಷವಾಗಿ ಸಾಗುವಳಿ ಮಾಡುವುದಕ್ಕಾಗಿ ಜಿಲ್ಲಾಧಿಕಾರಿಗಳಿಗೆ ಆದ್ಯತೆಯ ಮೇಲೆ ಅಧಿಕಾರವನ್ನು ನೀಡಲಾಗಿದೆ. ರಾಜ್ಯಮಟ್ಟದಲ್ಲಿ ಅಪರ ಮುಖ್ಯ ಕಾರ್ಯದರ್ಶಿಗಳು ಮತ್ತು ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ಒಂದು ಕಾರ್ಯನಿರತ ತಂಡವನ್ನು ರಚಿಸಿ ಅದರಲ್ಲಿ ಪ್ರಧಾನ ಕಾರ್ಯದರ್ಶಿಗಳು ಕಂದಾಯ ಇಲಾಖೆ, ಕೃಷಿ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಇವರುಗಳು ಸದಸ್ಯರಾಗಿರತಕ್ಕದ್ದೆಂದು, ಇವರು ಪ್ರತಿದಿನ ಪರಿಸ್ಥಿತಿಯನ್ನು ತಿಳಿದುಕೊಳ್ಳತಕ್ಕದ್ದೆಂದು ಮತ್ತು ಪರಿಹಾರ ಕಾರ್ಯಕ್ರಮದ ಅನುಷ್ಠಾನದ ಮೇಲ್ವಿಚಾರಣೆಯನ್ನು ಮಾಡತಕ್ಕಂಥದ್ದು ಎಂದು ಒಂದು ಸಮಿತಿಯನ್ನು ಮಾಡಿದ್ದೇವೆ. ಕೆಪಿಟಿಸಿಎಲ್‌ನವರು ಕುಡಿಯುವ ನೀರಿಗೆ ಅಳವಡಿಸಿರುವ ವಿದ್ಯುಚ್ಛಕ್ತಿ ಸರಬರಾಜನ್ನು ತೆಗೆಯುತ್ತಿದ್ದಾರೆಂದು ಸದಸ್ಯರು ಪ್ರಸ್ತಾಪ ಮಾಡಿದ್ದರು. ಕುಡಿಯುವ ನೀರಿಗೆ ಒದಗಿಸಿರುವ ವಿದ್ಯುಚ್ಛಕ್ತಿಯನ್ನು ಕಡಿತ ಮಾಡಬಾರದೆಂದು ರಾಜ್ಯ ಸರ್ಕಾರ ನಿರ್ಣಯ ತೆಗೆದುಕೊಂಡಿದೆ ಎಂದು ಹೇಳುವುದಕ್ಕೆ ನಾನು ಇಚ್ಛಿಪಡುತ್ತೇನೆ. ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ, ಗ್ರಾಮೀಣಾಭಿವೃದ್ಧಿ ಇಲಾಖೆ, ಜಲಾನಯನ ಮತ್ತು ಕಂದಾಯ ಮತ್ತು ಮುಂತಾದ ಇಲಾಖೆಗಳು ಕೈಗೊಳ್ಳುವ ಉದ್ಯೋಗ ಆಧಾರಿತ ಕಾರ್ಯಕ್ರಮಗಳಿಗಾಗಿ ಆಹಾರವನ್ನು ಒದಗಿಸುವುದು, ಆಹಾರಧಾನ್ಯಗಳ ಲಭ್ಯತೆಯ ಬಗ್ಗೆ ಒಂದು ಟಪ್ಪಣಿಯನ್ನು ಕಳುಹಿಸಿಕೊಡಲಾಗಿದೆ. 2001-02ನೇ ಸಾಲಿಗಾಗಿ ಬರಪರಿಹಾರ ನಿಧಿಯಲ್ಲಿ 78.29 ಕೋಟಿ ರೂಪಾಯಿಗಳ ಹಣ ಇಡುವುದು. ಇದರಲ್ಲಿ ಶೇಕಡಾ 75ರಷ್ಟು ಕೇಂದ್ರ ಪಾಲು, ಇದರಲ್ಲಿ 58.72 ಕೋಟಿ ರೂಪಾಯಿಗಳು. ಮತ್ತು ರಾಜ್ಯದ ಪಾಲು ಶೇಕಡಾ 25ರಷ್ಟು 19.75 ಕೋಟಿ ರೂಪಾಯಿಗಳು. As on 1-4-2001 the balance amount available with the DCs is Rs.41.54 crore and Rs.35.35 crore has been released subsequently bringing the total amount available with DCs to Rs.76.89 crore. Balance amount available with Finance Department is Rs.42.92 crore. The Government of India has so far released Rs.29.36 crore as its contribution to the calamity Relief Fund.

ಐಸಿಎಸ್ ಮತ್ತು ಅಭಿವೃದ್ಧಿ ಕಮೀಷನರ್‌ರವರು ಹವಮಾನ ಪರಿಸ್ಥಿತಿಯನ್ನು ಕುರಿತಂತೆ ಚರ್ಚಿಸಲು ಪ್ರತಿದಿನವು ಸಭೆಯನ್ನು ಸೇರಲಿದ್ದಾರೆ. ಈ ಸಭೆಯು ಪರಿಸ್ಥಿತಿಯನ್ನು ನಿರ್ವಹಣೆ ಮಾಡುವುದು ಮುಖ್ಯ ಕಾರ್ಯದರ್ಶಿಗಳು ಮತ್ತು ಮುಖ್ಯಮಂತ್ರಿಗಳ ಆಪ್ತ ಕಾರ್ಯದರ್ಶಿಗಳನ್ನೊಳಗೊಂಡಂತೆ ಸಂಬಂಧಪಟ್ಟ

ಕಾರ್ಯದರ್ಶಿಗಳಿಗೆ ಉತ್ತರವನ್ನು ಒದಗಿಸತಕ್ಕಂತಹ ಒಂದು ಏರ್ಪಾಟು ಮಾಡಲಾಗಿದೆ. ಭಾರತ ಸರ್ಕಾರವು ''ಕೆಲಸಕ್ಕಾಗಿ ಆಹಾರ'' ಎಂದು ಕರೆಯಲಾಗುವ ಒಂದು ಯೋಜನೆಯನ್ನು ರೂಪಿಸಿದೆ. ಈ ಯೋಜನೆಯು ಉದ್ಯೋಗ ಸೃಜನಯೋಜನೆಗಾಗಿ ಗರಿಷ್ಠ ವ್ಯಾಪ್ತಿಯವರೆಗೆ ಉಪಯೋಗಿಸಲು ಬಳಸಬಹುದಾಗಿರುತ್ತದೆ. ಈ ಯೋಜನೆಯಡಿಯಲ್ಲಿ ಸಂಬಳದ ಸಹಾಯವನ್ನು (ಎಂಪ್ಲಾಯ್‌ಮೆಂಟ್ ಪ್ರೋಗ್ರಾಮ್) ಭಾಗಶಃ ಆಹಾರವನ್ನು ಸಂದಾಯ ಮಾಡುವ ಮೂಲಕ ಹಾಗೂ ಭಾಗಶಃ ಹಣದ ರೂಪದಲ್ಲಿ ಸಂದಾಯ ಮಾಡಲಾಗುತ್ತದೆ. ಅಗತ್ಯ ಬಿದ್ದ ಕಡೆಗಳಲ್ಲೆಲ್ಲಾ ಗೋಶಾಲೆಗಳನ್ನು ತೆರೆಯಲು ತೀರ್ಮಾನಿಸಲಾಗಿದೆ, ಹೀಗೆ 15 ಅಂಶಗಳ ಕಾರ್ಯಕ್ರಮಗಳನ್ನು ರೂಪಿಸಿ, ಚರ್ಚೆಯನ್ನು ಮಾಡಿ ಪ್ರತಿಯೊಂದು ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಈ ನಿರ್ಣಯಗಳನ್ನು ತಮ್ಮ ಮೂಲಕ ನಾನು ಈ ಸದನಕ್ಕೆ ಇಡುತ್ತಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಮಾನ್ಯ ಚಂದ್ರೇಗೌಡರು, ಇದರ ಬಗ್ಗೆ ಏನಾದರೂ ಸ್ವಲ್ಪ ಸ್ಪಂದಿಸಬಹುದಾಗಿತ್ತು. ಹಾಗಾದರೆ ಎಕ್ಸ್‌ಚೆಕರ್ ಮೇಲೆ ಎಷ್ಟು ಬರ್ಡನ್ ಆಗುತ್ತದೆ ಎಂಬುದನ್ನು ಸಹ ಹೇಳಿಲ್ಲ. ಏಕೆ ಮಾಡುವುದಕ್ಕೆ ಆಗಲಿಲ್ಲವೆಂಬುದನ್ನು ಸಹ ಹೇಳಲಿಲ್ಲ, ಅಲ್ಪಾವಧಿ ಸಾಲವನ್ನು ದೀರ್ಘಾವಧಿ ಸಾಲವನ್ನಾಗಿ ಪರಿವರ್ತಿಸಲು ಏನು ತೊಂದರೆ ಎಂಬುದನ್ನು ಹೇಳಲಿಲ್ಲ. ನಿನ್ನೆ ಮಾನ್ಯ ಶ್ರೀಕಂಠಯ್ಯನವರು ಕೆಲವೊಂದು ವಿಷಯಗಳನ್ನೇನು ಪ್ರಸ್ತಾಪಿಸಿದ್ದರೋ, ಬರಗಾಲ ಕಾಮಗಾರಿಗಳನ್ನೇನು ಕೈಗೊಂಡಿದ್ದೇವೆ ಅದನ್ನು ಸುಂದರವಾಗಿ ತಿಳಿಸಿದರು ಅಷ್ಟೆ; ಅದಕ್ಕಿಂತ ಹೆಚ್ಚಿಗೆ ಏನು ಮಾಡಲಿಲ್ಲ. 3-4 ದಿವಸಗಳಿಂದ ಚರ್ಚೆ ನಡೆಯುತ್ತಿದೆ. ನನಗನಿಸುವ ಹಾಗೆ ಇದರ ಬಗ್ಗೆ ತಮಗೂ ಸಹ ತೃಪ್ತಿ ಇರಲಿಕ್ಕಿಲ್ಲ.

ಅಧ್ಯಕ್ಷರು: ನನಗೆ ತೃಪ್ತಿಯಾಗಿದೆ.

ಶ್ರೀ ಜಗದೀಶ್ ಶೆಟ್ಟರ್: ಬೇಕಾದರೆ ಅವರು ಇನ್ನೂ ವಿಚಾರ ಮಾಡಲಿ, ಅವರು ಇನ್ನೂ ಸಮಯ ತೆಗೆದುಕೊಳ್ಳಲಿ. ಬಡ್ಡಿ ಮನ್ನಾ ಮಾಡುವ ಬಗ್ಗೆ ಏನಾದರೂ ಲೆಕ್ಕಾಚಾರ ಮಾಡುವದರ ಬಗ್ಗೆ, ಸರ್ಕಾರದ ಮೇಲೆ ಆರ್ಥಿಕವಾಗಿ ಇಷ್ಟು ತೊಂದರೆಯಾಗುತ್ತದೆ, ಇದರ ಬಗ್ಗೆ ಏನು ಮಾಡಲಿಕ್ಕೆ ಸಾಧ್ಯವಿದೆ ಎಂಬುದರ ಬಗ್ಗೆ ಇನ್ನೂ ಸ್ವಲ್ಪ ಲೆಕ್ಕಾಚಾರ ಮಾಡಲಿ. ಇನ್ನು ಒಂದೆರಡು ದಿವಸ ಟೈಮ್ ತೆಗೆದುಕೊಳ್ಳಲಿ, ಸೋಮವಾರ ಬೇಕಾದರೆ ಸ್ಟೇಟ್‌ಮೆಂಟ್ ಕೊಡಲಿ, ನಾವು ಅಲ್ಲಿಯವರೆಗೂ ಕಾಯುತ್ತೇವೆ, ಸರ್ಕಾರದಿಂದ ಏನಾದರೂ ಪರಿಹಾರ ಸಿಗಬಹುದೆಂದು ರಾಜ್ಯದ ರೈತ ಕಾಯುತ್ತಿದ್ದಾನೆ. ಇದು ನನಗೆ ತೃಪ್ತಿ ತಂದಿಲ್ಲ, ನಾವು ಬಹಳ ನಿರೀಕ್ಷೆಯನ್ನಿಟ್ಟುಕೊಂಡಿದ್ದೆವು. 15 ಪಾಯಿಂಟ್ ಪ್ರೋಗ್ರಾಮ್‌ನಲ್ಲಿ ನಮ್ಮ ಬೇಡಿಕೆಗಳಲ್ಲಿ ಕೆಲವನ್ನಾದರೂ ಈಡೇರಿಸಬಹುದಾಗಿತ್ತೆಂಬ ಆಸೆಯಾಗಿತ್ತು. ಅದು

ಆಗಲಿಲ್ಲ, ನಮಗೆ ನಿರಾಶೆಯಾಗಿದೆ. ರೈತ ಇದನ್ನು ಕ್ಷಮಿಸುವುದಿಲ್ಲ, ಮಾನ್ಯ ಅಧ್ಯಕ್ಷರೆ, ತಾವೇ ಇವರಿಗೆ ಹೇಳಬೇಕಾಗುತ್ತದೆ, ಇದನ್ನು ತಮಗೆ ಬಿಡುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯ(ಕನಕಪುರ): ಮಾನ್ಯ ಅಧ್ಯಕ್ಷರೆ, 5 ದಿನಗಳ ಚರ್ಚೆಯ ನಂತರ ಸರ್ಕಾರದವರು ಮಾನ್ಯ ವಿರೋಧಪಕ್ಷದವರ ಮತ್ತು ಅಡಳಿತ ಪಕ್ಷದ ಸದಸ್ಯರ ಮನಸ್ಸನ್ನು ಅರ್ಥಮಾಡಿಕೊಂಡು ಕೆಲವು ತೀರ್ಮಾನಕ್ಕೆ ಈಗಲಾದರೂ ಸಹಿತ ಬಂದಿರುವುದು ಸ್ವಾಗತಾರ್ಹ. ಏಕೆಂದರೆ ತತ್ಕಾಲ್ ಯೋಜನೆ ಏನಿದೆ ಅದನ್ನು ಸಂಪೂರ್ಣವಾಗಿ ಕೈಬಿಟ್ಟಿದ್ದೇವೆಂದು ಹೇಳಿದ್ದಾರೆ, ಸರ್ಕಾರ ಮಾಡಿರುವುದು ಯೋಗ್ಯಕ್ರಮ, ನಾವು ಧರಣಿ ಮಾಡಿದ ಮೇಲಾದರೂ ಈ ಯೋಜನೆಯನ್ನು ಕೈಬಿಡುವ ಬಗ್ಗೆ ಜ್ಞಾನೋದಯವಾಯಿತೆಂಬುದನ್ನು ನಾನು ಒಪ್ಪುತ್ತೇನೆ. ಕಾಂಗ್ರೆಸ್ ಸರ್ಕಾರದವರಿಗೆ 10, 12, 15, 20 ಅಂಶಗಳ ಕಾರ್ಯಕ್ರಮವೆಂದರೆ ಇವರಿಗೆ ಬಹಳ ಪ್ರೀತಿ. ನಾವು ಮಾಡಿರುವ ಎಲ್ಲಾ ಸಲಹೆಗಳನ್ನು ಸಹ ಇವರು ಬಹುಶಃ ಕಂಪ್ಯೂಟರ್‌ನಲ್ಲಿ ಫೀಡ್ ಮಾಡಿರಬೇಕು. ಆ ಕಂಪ್ಯೂಟರ್ ಕೊಟ್ಟಿರುವ ಉತ್ತರವೇ ಇದು. ಮಾನ್ಯ ಅಧ್ಯಕ್ಷರೆ, ನನಗೆ ಹೇಳಿಕೊಳ್ಳಲು ನಾಚಿಕೆಯಾಗುತ್ತದೆ, ನಾವು ಮಾಡಿದ್ದು ಬೆಟ್ಟ ಅಗೆದು ಇಲಿ ಹಿಡಿದಂತೆ ಆಗಿದೆ. ಕೊನೆಗೂ ನಮ್ಮ ಅರಣ್ಯರೋದನ ಇವರಿಗೆ ಕೇಳಿಸಲಿಲ್ಲ, ನೀವು ಬಜೆಟ್ ಕಾರ್ಯಕ್ರಮಗಳನ್ನು ಈಗ ಪ್ರಾರಂಭಿಸದೆ ಇನ್ಯಾವಾಗ ಪ್ರಾರಂಭಿಸುತ್ತೀರಿ? ಅದನ್ನು ಪ್ರಾರಂಭಿಸಬೇಕಾಗಿರುವುದು ಈಗ. ಮಾರ್ಚ್ 2002ರಲ್ಲಿ ಪ್ರಾರಂಭಿಸುತ್ತೀರಾ? ಇದು ಒಂದು ಅಂಶವೇ? ಬೀಜ ಕೊಡುತ್ತೇವೆನ್ನುತ್ತೀರಿ, ಅಲ್ಲಿ ಬಿತ್ತನೆಯನ್ನು ಮಾಡುವುದಕ್ಕೆ ಆಗುವುದಿಲ್ಲ, ಇನ್ನು ಬೀಜವನ್ನು ತೆಗೆದುಕೊಂಡೇನು ಮಾಡುವುದು? ಡಿ.ಸಿ.ಗಳು ಸಂಪೂರ್ಣವಾಗಿ ಮೇಲ್ವಿಚಾರಣೆ ಮಾಡುತ್ತಾರೆ ಎಂದು ಹೇಳುತ್ತೀರಿ, ಅವರು ಮಾಡದೆ ಇನ್ಯಾರು ಮಾಡುತ್ತಾರೆ? ನಿಮ್ಮ ಜಿಲ್ಲಾ ಮಂತ್ರಿಗಳು ಅಲ್ಲಿಗೆ ಹೋಗುವುದಿಲ್ಲ, ಡಿ.ಸಿ.ಗಳ ಸಿಆರ್‌ನ್ನು ಅವರು ಬರೆಯುವುದರಿಂದ ಡಿ.ಸಿ.ಗಳು ಆ ಕೆಲಸವನ್ನು ಮಾಡುತ್ತಾರೆ. ಮೇವು ಪ್ರತಿಬಂಧ ಮಾಡಿರುವುದನ್ನು ನಾನು ಒಪ್ಪುತ್ತೇನೆ, ಏನು ಮಾಡಬೇಕಾಗಿತ್ತೆಂದರೆ, ಮೇವನ್ನು ಯಾರು ತಂದು ಸಂಗ್ರಹಿಸಿಟ್ಟುಕೊಳ್ಳುತ್ತೇವೆಂದು ಹೇಳುತ್ತಾರೆ, ಅವರಿಗೆ ಟ್ರಾನ್ಸ್‌ಪೋರ್ಟೇಶನ್ ಫ್ರೀಯಾಗಿ ಕೊಡುತ್ತೇವೆಂದು ಹೇಳಲಿಲ್ಲ. ಅಡಿಷನಲ್ ಸೆಕ್ರೆಟರಿ, ರೆವಿನ್ಯೂ ಸೆಕ್ರೆಟರಿ, ಆರ್‌ಡಿಪಿಆರ್ ಸೆಕ್ರೆಟರಿ ಅವರೆಲ್ಲಾ ಉತ್ತಮ ಅಧಿಕಾರಿಗಳು. ಅದಲ್ಲದೆ ಇನ್ನೊಂದು ಟಾಸ್ಕ್‌ಫೋರ್ಸ್ ಇದ್ದು ಅವರೆಲ್ಲಾಡೈಲಿ ಸೇರಬೇಕು, ಬೇರೆ ಕೆಲಸವಿಲ್ಲ, ಇದನ್ನಾದರೂ ಮಾಡಿಕೊಂಡು ಕೂಡಲಿ, ಇದರಲ್ಲಿ ನಮ್ಮ ತಕರಾರು ಇಲ್ಲ. ಕೇಂದ್ರಸರ್ಕಾರದವರು ಈಗಾಗಲೇ 3 ರೂಪಾಯಿಗಳಿಗೆ ಒಂದು ಕೆ.ಜಿ.ಅಕ್ಕಿಯನ್ನು ನೀಡಿ ಎಂದು ಘೋಷಣೆ ಮಾಡಿದ್ದಾರೆ. ಅದನ್ನು ತೆಗೆದುಕೊಂಡು ಬಂದು ಹಂಚುವ ಪೋಸ್ಟ್‌ಮನ್ ಕೆಲಸ ಮಾಡುವುದು ಒಂದು ಅಂಶದ ಕಾರ್ಯಕ್ರಮವೇ? ಕೇಂದ್ರಸರ್ಕಾರದವರು 30 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ, 42 ಕೋಟಿ ರೂಪಾಯಿಗಳು ಬಾಕಿ ಇದೆ,

ಇದನ್ನೇ ಲಕ್ಷಗಳಲ್ಲಿ ಹೇಳಿದ್ದರೆ ಬಹುಶಃ ಚೆನ್ನಾಗಿರುತ್ತಿತ್ತು. 42 ಕೋಟಿ ರೂಪಾಯಿಯನ್ನು 5,000 ಪಂಚಾಯಿತಿಗಳಿಗೆ ಹಂಚಿದರೆ ಎಲ್ಲಿ ಉಳಿಯುತ್ತದೆ? ಬಕಾಸುರನ ಹೊಟ್ಟೆಗೆ ಅರೇ ಕಾಸಿನ ಮಜ್ಜಿಗೆ ಇದ್ದ ಹಾಗೆ ಮಾನ್ಯ ಅಧ್ಯಕ್ಷರೆ, ತಾವು ದೊಡ್ಡ ಮನಸ್ಸು ಮಾಡಿದರೆ ಸಾಧ್ಯವಾಗುತ್ತದೆ. ಬರಗಾಲದ ಪರಿಸ್ಥಿತಿಯ ಭೀಕರತೆಯನ್ನು, ಗಂಭೀರತೆಯನ್ನು ಅರ್ಥಮಾಡಿಕೊಂಡು ತಾವು ಚರ್ಚೆಗೆ ರೂಲ್ 69 ಅಡಿಯಲ್ಲಿ ಅವಕಾಶ ಕೊಟ್ಟರೆ ಆಗುತ್ತದೆ. ಅವರು ಅಡ್ಜರ್ನ್‌ಮೆಂಟ್ ಮೋಷನ್‌ನ್ನು ಒಪ್ಪಿಕೊಳ್ಳಬೇಕಾಗಿತ್ತು, ಹೋಗಲಿ ಬಿಡಿ, ಈಗಲಾದರೂ ತಾವು ಸಾಲ ವಸೂಲಾತಿಯನ್ನು ಮುಂದೂಡಿ, ರೈತರ ಬಾಕಿ ವಸೂಲಿ ಹೆಸರಿನಲ್ಲಿ ಕೆಪಿಟಿಸಿಎಲ್ ಡಿಸ್‌ಕನೆಕ್ಟ್ ಮಾಡುವುದನ್ನು ನಿಲ್ಲಿಸಿ, ಅಲ್ಪಾವಧಿ ಸಾಲಗಳನ್ನು ದೀರ್ಘಾವಧಿ ಸಾಲಗಳನ್ನಾಗಿ ಪರಿವರ್ತಿಸಿ, ಬಡ್ಡಿಯನ್ನು ಮನ್ನಾ ಮಾಡಿ, ರೈತರು ತೆಗೆದುಕೊಳ್ಳುವ ಸಾಲದ ಮೇಲೆ ನ್ಯಾಷನಲೈಜ್ಡ್ ಬ್ಯಾಂಕ್, ಕೋ- ಆಪರೇಟಿವ್ ಬ್ಯಾಂಕ್, 10 ಪರ್ಸೆಂಟಿನ ಮೇಲೆ ಬಡ್ಡಿ ಹಾಕದಂತೆ ಮಾಡಿ. ಇದನ್ನಾದರೂ ಮಾಡಿದರೆ ನಾವು ಧರಣಿಯನ್ನು ಹಿಂತೆಗೆದುಕೊಂಡು ಇಲ್ಲಿ ಕುಳಿತು ಚರ್ಚೆ ಮಾಡಬಹುದು. ಅದಕ್ಕೆ ತಾವು ಅನುವು ಮಾಡಿಕೊಡಬೇಕು, ನಾವಿಷ್ಟೆಲ್ಲಾ ಹೇಳಿದ ಮೇಲಾದರೂ ಮಾಡಬೇಕು. 15 ಅಂಶ ಕಾರ್ಯಕ್ರಮ ಎಂದು ನಿಮಗೆ ಅನೌನ್ಸ್ ಮಾಡಲು ನಿಮಗೆ ಯಾರು ಹೇಳಿದ್ದು, ನನಗಂತೂ ಅರ್ಥವಾಗಲಿಲ್ಲ. ಇದರ ಬಗ್ಗೆ ನಾನು ನೊಂದ ಮನಸ್ಸಿನಿಂದ ಹೇಳುತ್ತಿದ್ದೇನೆ. ಸರ್ಕಾರ ಸಾಮೂಹಿಕವಾಗಿ ಚಿಂತನೆಯನ್ನು ಮಾಡಿಲ್ಲ, ಆ ರೀತಿ ಮಾಡಿದ್ದರೆ ಅಲ್ಲೆಲ್ಲಾ ಅತಿರಥ ಮಹಾರಥರು 30-40 ವರ್ಷಗಳು ನಿಮ್ಮ ಹಾಗೆ ಈ ಸದನದಲ್ಲಿ ಕೆಲಸ ಮಾಡಿದವರು ಇದ್ದಾರೆ. ಆದರೆ ಸಾಮೂಹಿಕ ಚಿಂತನೆ ಮಾಡಿಲ್ಲ, ಬರಗಾಲ ಬಂದಿದೆ, ಆದರೆ ನೀವು ಯಾರ ಸರ್ಟಿಫಿಕೇಟ್‌ಗೋ ಕಾದಿದ್ದೀರಿ. ದಯವಿಟ್ಟು ಕ್ಷಮಿಸಿ, ನಮಗೆ ನಾಚಿಕೆಯಾಗುತ್ತಿದೆ, ನಾವು ಧರಣಿಯನ್ನು ಮುಂದುವರಿಸುತ್ತೇವೆ.

+ಶ್ರೀ ಸಿ.ಚೆನ್ನಿಗಪ್ಪ(ಕೊರಟಗೆರೆ): ಮಾನ್ಯ ಅಧ್ಯಕ್ಷರೆ, ತಮ್ಮ ಸಮ್ಮುಖದಲ್ಲಿ 5 ದಿವಸಗಳ ಚರ್ಚೆ ನಡೆದನಂತರ ಸದನದಲ್ಲಿ ಉತ್ತರ ಕೊಟ್ಟು 15 ಅಂಶಗಳ ಕಾರ್ಯಕ್ರಮವನ್ನು ತೋರಿಸಿದರು. ಇವತ್ತಿನ ದಿವಸ ಮಾನ್ಯ ಚಂದ್ರೇಗೌಡರು ಅನೌನ್ಸ್ ಮಾಡಿದ ಪ್ರಚಾರ ಹೇಗಿತ್ತೆಂದರೆ ಹೊಟ್ಟೆಗೆ ಊಟ ಕೊಡುವುದಿಲ್ಲ, ಊಟ ತೋರಿಸಿ ವಾಪಸ್ಸು ತೆಗೆದುಕೊಂಡ ಹಾಗೆ ಇತ್ತು. ದಯಮಾಡಿ ಇವತ್ತು ಅಷ್ಟೊಂದು ಅನಾವೃಷ್ಟಿ, ಇದ್ದು ಎಲ್ಲೂ ಮಳೆಯಿಲ್ಲದ ಕಾಲದಲ್ಲಿ, ರೈತರು ಇವತ್ತು ಬೀಜವನ್ನು ಸಹ ಬಿತ್ತಿರುವುದಿಲ್ಲ. ಆದ್ದರಿಂದ ಸರ್ಕಾರ ಕೂಡತಕ್ಕಂಥ ಪರಿಹಾರ ಧನವನ್ನು ಜಾಸ್ತಿ ಮಾಡಬೇಕು. ಹಾಗೆಯೇ ಬಡ್ಡಿ ಮನ್ನಾ ಮಾಡಬೇಕಾಗುತ್ತದೆ. ಕೆಇಬಿಯವರು ರೈತರ ಪಂಪ್‌ಸೆಟ್‌ಗಳಿಗೆ ವಿದ್ಯುತ್‌ನ್ನು ಕಡಿತ ಮಾಡುವುದಿಲ್ಲವೆಂದು ತಾವು ಹೇಳಿದ್ದರಿ ಇದು ಒಳ್ಳೆಯದೆಂದು ನಾನು ಒಪ್ಪುತ್ತೇನೆ. ಅದೇ ರೀತಿ ಇವತ್ತು ಕೂಲಿಗಾಗಿ ಕಾಳು

ಪಚಾರವಾಗಿರಬಹುದು, ಹಳ್ಳಿಗಾಡಿನಲ್ಲಿ ಮಾಡುವಂತಹ ಕೆಲಸಗಳಾಗಿರಬಹುದು ಕೇಂದ್ರವಾಗಲಿ ಅಥವಾ ರಾಜ್ಯಸರ್ಕಾರವಾಗಲಿ ಹೆಚ್ಚಿನ ಪರಿಹಾರವನ್ನು ರೈತರಿಗೆ ಕೊಡುವುದರಿಂದ ಅನುಕೂಲವಾಗುತ್ತದೆಯೇ ಹೊರತು ತಾವು ಕಮಿಟಿ ಅಥವಾ ಟಾಸ್ಕ್‌ಫೋರ್ಸ್ ಮಾಡುವುದರಲ್ಲಿ ಏನು ಅರ್ಥವಿಲ್ಲ. ಈ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಜನತೆಯ ಪರವಾಗಿ ಅರಿಕೆ ಮಾಡಿಕೊಳ್ಳುವುದೇನೆಂದರೆ, ರಾಜ್ಯದ ರೈತರ ಅನುಕೂಲಕ್ಕಾಗಿ ಹೆಚ್ಚಿನ ಹಣವನ್ನು ಬಿಡುಗಡೆ ಮಾಡಿ ಜನರಿಗೆ ಅನುಕೂಲ ಮಾಡಿಕೊಡಬೇಕೆಂದು ತಮ್ಮ ಮೂಲಕ ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

2.00 ಪಿ.ಎಂ

ಅಧ್ಯಕ್ಷರು: ಮಾನ್ಯ ಸಹಕಾರ ಮಂತ್ರಿಗಳು ಏನು ಹೇಳುತ್ತಾರೆ ಹೇಳಲಿ.

+ಶ್ರೀ ಡಿ.ಕೆ.ಶಿವಕುಮಾರ್(ಸಹಕಾರ ಸಚಿವರು): ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದ ನಾಯಕರು ಅವರದೆ ಆದ ಧಾಟಿಯಲ್ಲಿ ವಿರೋಧಪಕ್ಷದ ಕೆಲಸವನ್ನು ಮಾಡಿದ್ದಾರೆ. ಇದು ರೈತರ ಸರ್ಕಾರ ಅದನ್ನು ಸ್ಪಷ್ಟಪಡಿಸುವುದಕ್ಕೆ ಬಯಸುತ್ತೇನೆ. ರೈತರ ಬಗ್ಗೆ ಸರ್ಕಾರ ಎಲ್ಲಾ ರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತದೆ. ರೈತ ಕಷ್ಟ ಪಡಲಿಕ್ಕೆ ಸರ್ಕಾರ ಬಿಡುವುದಕ್ಕೆ ತಯಾರಿಲ್ಲ. ಬಡ್ಡಿ ಮನ್ನಾ ಮಾಡುವ ವಿಚಾರದಲ್ಲಿ ತಾವು ಮತ್ತು ನಮ್ಮ ಸ್ನೇಹಿತರು ಏನು ಪ್ರಸ್ತಾಪ ಮಾಡುತ್ತಿದ್ದಾರೆ, ಹಿಂದಿನ ವರ್ಷಗಳಲ್ಲಿ 1,440 ಕೋಟಿ ರೂಪಾಯಿ ಬೆಳೆ ಸಾಲವನ್ನು ರೈತರಿಗೆ ಕೊಡಲಾಗಿದೆ. ಬೆಳೆ ಸಾಲ ಕೊಟ್ಟಂತಹ ಸಂದರ್ಭದಲ್ಲಿ ಮಳೆಬೆಳೆ ಚೆನ್ನಾಗಿ ಆಗಿ ರೈತರ ಪ್ರೊಡೆಕ್ಷನ್ ಚೆನ್ನಾಗಿ ಆಗಿ ಶೇಕಡ 70 ರಷ್ಟು ರಿಕವರಿಯಾಗಿದೆ. ಕಳೆದ ಏಳೆಂಟು ವರ್ಷಗಳಲ್ಲಿ ಆಗದಿರತಕ್ಕ ರಿಕವರಿ ಕಳೆದ ವರ್ಷ ಆಗಿದೆ. ಸಾಲ ಉಳಿದುಕೊಂಡಿರುವುದು ಕೇವಲ 30 ಪರ್ಸೆಂಟ್ ಮಾತ್ರ. 30 ಪರ್ಸೆಂಟ್ ಉಳಿಸಿಕೊಂಡಿರುವವರಿಗೆ ಬಡ್ಡಿ ಮನ್ನಾ ಮಾಡಬೇಕೆಂದು ಕಳೆದ ನಾಲ್ಕು ದಿವಸಗಳಿಂದ ಪ್ರಸ್ತಾಪ ಮಾಡುತ್ತಿದ್ದಾರೆ. ಮಳೆಯಾಗದೆ ಬೆಳೆ ಬೆಳೆಯಲಿಕ್ಕೆ ಆಗುತ್ತಿಲ್ಲವೆನ್ನುವ ಮಾತನ್ನು ಹೇಳುತ್ತಿದ್ದಾರೆ. ಈಗ ಸೊಸೈಟಿಗಳಲ್ಲಿ ವ್ಯವಸಾಯ ಸೇವಾ ಸಹಕಾರ ಬ್ಯಾಂಕುಗಳಲ್ಲಿ ಈಗ ಬೆಳೆ ಸಾಲವನ್ನು ಕೊಡುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಬೀಜ ಗೊಬ್ಬರದ ವ್ಯವಸ್ಥೆಯಾಗುತ್ತಿದೆ. ಈಗ ತಾವು ಕೇಳತಕ್ಕದ್ದು ಮುಂದಿನ ಮಾರ್ಚಿಯ ಬಗ್ಗೆ. ಈ ವರ್ಷ ಸರಿಯಾಗಿ ಬೆಳೆ ಆಗಲಿಲ್ಲವೆಂದರೆ ತಾವು ಕೇಳುವಂತಹ ಸಂದರ್ಭ ನಿರ್ಮಾಣವಾಗುತ್ತದೆಯೇ ಹೊರತು, ಯಾವಾಗ ಜಿಲ್ಲಾಧಿಕಾರಿಗಳ ಅಣಿವಾರಿಯನ್ನು ಡಿಕ್ಲೇರ್ ಮಾಡಿದಂತಹ ಸಂದರ್ಭದಲ್ಲಿ ರೈತರ ಬೆಳೆ ನಷ್ಟವಾದಾಗ ಇರತಕ್ಕ ಯೋಜನೆ. ಪ್ರಕೃತಿ ಪಕೋಪದಿಂದ ಬೆಳೆ ನಷ್ಟವಾದಾಗ ಅಲ್ಪಾವಧಿ ಸಾಲವನ್ನು ದೀರ್ಘಾವಧಿ ಸಾಲವನ್ನಾಗಿ ಪರಿವರ್ತನೆ ಮಾಡಲಿಕ್ಕೆ ಅವಕಾಶವಿದೆ. ಪ್ರಕೃತಿ ಪಕೋಪದಿಂದ ಬೆಳೆ ಇಳುವರಿಯಲ್ಲಿ ವೈಜ್ಞಾನಿಕ ಆಧಾರದ ಮೇಲೆ ಬೆಳೆ ನಾಶವಾದಾಗ ನಬಾರ್ಡ್ ಆಕ್ಟ್ 22ರ ಪ್ರಕಾರ ಅಲ್ಪಾವಧಿ

ಸಾಲವನ್ನು ದೀರ್ಘಾವಧಿ ಸಾಲವನ್ನಾಗಿ ಪರಿವರ್ತನೆ ಮಾಡಲಿಕ್ಕೆ ಅವಕಾಶವಿದೆ. ಬೆಳೆ ಇಳುವರಿ ವೈಜ್ಞಾನಿಕ ಆಧಾರದ ಮೇಲೆ ಸರ್ಕಾರ ಅಣಿವಾರಿಯನ್ನು ಘೋಷಣೆ ಮಾಡಿ, ಅಂದರೆ ಇಳುವರಿ ಸಾಮಾನ್ಯವಾಗಿ ವರ್ಷದ ಸರಾಸರಿ ಶೇಕಡ 50ಕ್ಕಿಂತ ಕಡಿಮೆಯಾದಾಗ ಮಾತ್ರ ಅಲ್ಪಾವಧಿ ಸಾಲವನ್ನು ಮಧ್ಯಮಾವಧಿ ಸಾಲವನ್ನಾಗಿ ಪರಿವರ್ತನೆ ಮಾಡಲಿಕ್ಕೆ ಅವಕಾಶವಿದೆ. ಇವರು ಬಡ್ಡಿ ಮನ್ನಾ ಮಾಡಬೇಕೆಂದು ಹೇಳುತ್ತಾರೆ. ಎಲ್ಲಿ ಅಂತಹ ಸಂದರ್ಭ ನಿರ್ಮಾಣವಾಗಿದೆ? ಶೇಕಡ 75ರಷ್ಟು ಸಾಲವನ್ನು ರೈತರು ತುಂಬಿದ್ದಾರೆ. ಉಳಿದ 30 ಪರ್ಸೆಂಟ್ ರೈತರು ಸಾಲವನ್ನು ಕೊಟ್ಟಿಲ್ಲ. ಅವರಿಗೆ ಬಡ್ಡಿ ಮನ್ನಾ ಮಾಡುವುದಕ್ಕೆ ಆಗುತ್ತದೆಯೆ? ಕಟ್ಟಿರುವ ಹಣವನ್ನು ವಾಪಸ್ಸು ಕೊಡುವುದಕ್ಕೆ ಸಾಧ್ಯವೆ? ಹಿಂದೆ ನಮ್ಮ ಸ್ನೇಹಿತರು ಅಧಿಕಾರದಲ್ಲಿದ್ದಂತಹ ಸಂದರ್ಭದಲ್ಲಿ 1995ರಲ್ಲಿ ನಬಾರ್ಡ್‌ಗೆ ಏನು ಬರೆದು ಕೊಟ್ಟಿದ್ದಾರೆಂದರೆ "We will refrain from any interest-waiver/loan-waiver scheme violating recovery climate" ಎಂದು ತಾವೇ ಬರೆದುಕೊಟ್ಟಿದ್ದೀರಿ. ಅವರು ತೆಗೆದುಕೊಂಡಂತಹ ಸಾಲವನ್ನು ವಾಪಸ್ಸು ಕಟ್ಟಲಿಲ್ಲ. ವಾಪಸ್ಸು ಕೊಡದಿದ್ದರೆ ಅವರು ರೀಫೈನಾನ್ಸ್ ಮಾಡುವುದಿಲ್ಲ. ಅವರು ಫೈನಾನ್ಸ್ ಮಾಡಲಿಲ್ಲವೆಂದರೆ ನಾವು ರೈತರಿಗೆ ಕೊಡುವುದಕ್ಕಾಗುವುದಿಲ್ಲ. 1500 ಕೋಟಿ ರೂಪಾಯಿ ಈ ವರ್ಷ ಕೊಡಬೇಕೆಂದು ಕೇಳಿದ್ದೇವೆ. ಮುಂದಿನ ವರ್ಷ 10 ಪರ್ಸೆಂಟ್ ಹೆಚ್ಚು ಮಾಡಬೇಕೆಂದರೆ, ರೆಕವರಿ ಆಗಲೇಬೇಕು. ಬಡ್ಡಿ ಮನ್ನಾ ಮಾಡುತ್ತೇವೆಂದು ಮಾಡಿದರೆ, ಸೊಸೈಟಿಗಳಿಗೆ ಅವರದೇ ಆದಂತಹ ಶಕ್ತಿಯಿದೆ ರೈತರಿಗೆ ಸಾಲ ಕೊಡುವುದಕ್ಕೆ ಮುಂದೆ ಬರುವುದಿಲ್ಲ. ಇಂತಹ ಒಂದು ಪರಿಸ್ಥಿತಿ ಇದೆ. ಹಿಂದೆ ತಾವೇನು 1995 ರಲ್ಲಿ 135 ಕೋಟಿ ರೂಪಾಯಿ ಮನ್ನಾ ಮಾಡಿದ್ದೀರಿ ಅದನ್ನು ಒಂದೇ ಸಾರಿ ಕೊಡುವುದಕ್ಕೆ ಆಗಲಿಲ್ಲ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಕೂಡ ನಾವು ಐದೂವರೆ ಕೋಟಿ ರೂಪಾಯಿಗಳನ್ನು ಕೊಟ್ಟು ಮನ್ನಾ ಮಾಡಬೇಕಾದ ಪರಿಸ್ಥಿತಿ ಬಂತು. ನಮ್ಮ ಸರ್ಕಾರಕ್ಕೆ ರೈತರ ಬಗ್ಗೆ ಕಾಳಜಿಯಿದೆ. 1997-98ರಲ್ಲಿ 10 ಜಿಲ್ಲೆಗಳಲ್ಲಿ ಬರಗಾಲ ಬಂದಾಗ ಅಣಿವಾರಿ ಡಿಕ್ಲೇರ್ ಆಯಿತು. ಹಿಂದಿನ ಸರ್ಕಾರ ಏಕೆ ಬಡ್ಡಿಯನ್ನು ಮನ್ನಾ ಮಾಡಲಿಲ್ಲ? ಅಣಿವಾರಿ ಡಿಕ್ಲೇರ್ ಆದ ಮೇಲೆ ಕೂಡ ಕೆಲವು ಜಿಲ್ಲಾಧಿಕಾರಿಗಳು ಡಿಕ್ಲೇರ್ ಮಾಡಬೇಕೆಂದು ಹೇಳಿದರೂ ಅವ್ರೊತ್ತು ನೀವು ಬಡ್ಡಿ ಮನ್ನಾ ಮಾಡಲಿಲ್ಲ. ಆಗ ನಿಮ್ಮ ಕೈ ಕಟ್ಟಿತ್ತಾ? ನಾವು ಅಲ್ಲಿ ವಿರೋಧ ಪಕ್ಷದಲ್ಲಿ ಕುಳಿತುಕೊಂಡು ಗಲಾಟೆ ಮಾಡಿದ್ದೇವೆ. ಇಲ್ಲಿ ನಾನು ಟೀಕೆ ಮಾಡುವುದಕ್ಕೆ ತಯಾರಿಲ್ಲ. ಆದರೆ ವಾಸ್ತವಾಂಶ ಏನಿದೆ ಎನ್ನುವುದು ಅವರಿಗೆ ಪ್ರಾಮಾಣಿಕವಾಗಿ ಗೊತ್ತಿದೆ. ನಮ್ಮ ಸರ್ಕಾರ ರೈತರಿಗೆ ಸಹಾಯ ಮಾಡಬೇಕೆಂದರೆ ಖಂಡಿತವಾಗಿಯೂ ಮಾಡಲಿಕ್ಕೆ ಬದ್ಧವಾಗಿದೆ. ಅವರ ಕೈಯಲ್ಲಿ ಬುದ್ಧಿ ಹೇಳಿಸಿಕೊಂಡು ಪಾಠ ಕಲಿಯುವುದು ನಮಗೆ ಬೇಕಾಗಿಲ್ಲ. ಪ್ರತಿ ಹಂತದಲ್ಲಿಯೂ ಕೂಡ ಸರ್ಕಾರ ನಾವು ಪ್ರಮಾಣ ವಚನ ಸ್ವೀಕಾರ ಮಾಡಿದಾಗಿನಿಂದಲೂ ರೈತರ ಬಗ್ಗೆ ಚಿಂತನೆ ಮಾಡುತ್ತೇವೆ. ಇವತ್ತು ಮಾಡುತ್ತೇವೆ, ನಾಳೆ ಮಾಡುತ್ತೇವೆ ಇಡೀ ರಾಜ್ಯದ ಜನ ಗ್ರಾಮೀಣ ಪ್ರದೇಶದ ಜನ ನಗರ ಪಟ್ಟಣಪ್ರದೇಶಗಳ ಜನ ಸರ್ಕಾರ ಉತ್ತಮವಾದ

ಕೆಲಸವನ್ನು ಮಾಡುತ್ತಿದೆಯೆಂದು ನಮಗೆ ಎಲ್ಲಾ ಸಂದರ್ಭಗಳಲ್ಲೂ ಆಶೀರ್ವಾದ ನೀಡಿದ್ದಾರೆ. ನಾವೇನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ ಅದನ್ನು ಮನವರಿಕೆ ಮಾಡುವುದಕ್ಕೆ ನಾನು ತಯಾರಿದ್ದೇನೆ. ನಮಗೆ ರೈತರ ಬಗ್ಗೆ ಕಾಳಜಿಯಿದೆ. ಬರಗಾಲ ಬರಲಿ ಅದು ಡಿಕ್ಲೇರ್ ಆಗಲಿ. ವೈಜ್ಞಾನಿಕವಾಗಿ ಬರಗಾಲವೆಂದು ಆಗಲಿ ಆಗ ನಾವು ಏನು ಮಾಡಬೇಕೆಂದು ನೋಡೋಣ.

(ಈ ಸಂದರ್ಭದಲ್ಲಿ ವಿರೋಧಪಕ್ಷದ ಎಲ್ಲಾ ಸದಸ್ಯರು ಓಹೋ ಎಂದು ಕೂಗುವುದರ ಜೊತೆಗೆ ರೈತ ವಿರೋಧಿ ಸರ್ಕಾರಕ್ಕೆ ಧಿಕ್ಕಾರವೆಂದು ಕೂಗುತ್ತಿದ್ದರು.)

ಶ್ರೀ ಪಿ.ಪಾಪಣ್ಣ: ಮಾನ್ಯ ಅಧ್ಯಕ್ಷರೆ, ಮೈಸೂರು ಜಿಲ್ಲೆಯಲ್ಲಿ ಎಲ್ಲಾ ಸಹಕಾರ ಬ್ಯಾಂಕುಗಳು ಸಾಲವನ್ನು ನವೀಕರಣ ಮಾಡಿದ್ದಾರೆ. ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳವರು ವ್ಯವಸಾಯ ಸೇವಾ ಸಹಕಾರ ಬ್ಯಾಂಕಿನವರು ಬುಕ್ ಅಡ್ಜೆಸ್ಟ್‌ಮೆಂಟ್ ಮಾಡಿಕೊಂಡು ಸಾಲ ಕೊಟ್ಟಿದ್ದಾರೆ. ದಯವಿಟ್ಟು ಇದನ್ನು ಸಹಕಾರ ಸಚಿವರು ಗಮನಿಸಬೇಕು.

ಶ್ರೀ ಜಗದೀಶ್‌ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಇವರಿಗೆ ಅಧಿಕಾರಿಗಳು ಸರಿಯಾದ ಮಾಹಿತಿಯನ್ನು ಕೊಟ್ಟಿಲ್ಲ. ಬುಕ್ ಅಡ್ಜೆಸ್ಟ್‌ಮೆಂಟ್ ಮಾಡಿಕೊಂಡು ಸಾಲ ಕೊಟ್ಟಿದ್ದಾರೆ. ನಮ್ಮ ಭಾಗದಲ್ಲಿ ಶೇಕಡ 30ರಷ್ಟು ರೆಕವರಿಯಾಗಿಲ್ಲ. ದಯವಿಟ್ಟು ಮಾಹಿತಿಯನ್ನು ತೆಗೆದುಕೊಳ್ಳಿ. ನಾವು ಇನ್ನು ಚರ್ಚೆ ಮಾಡಬೇಕಾಗಿದೆ ಸೋಮವಾರ ಮಾಹಿತಿಯನ್ನು ತೆಗೆದುಕೊಳ್ಳಲಿ.

ಅಧ್ಯಕ್ಷರು: ಇವತ್ತಿನ ಪ್ರಶ್ನೋತ್ತರ ವೇಳೆ ಹೋಯಿತು. ಎಷ್ಟೋ ಜನ ಶಾಸಕರು ತಮ್ಮ ಪ್ರಶ್ನೆಗಳಿಗಾಗಿ ಕಾಯ್ದಿದ್ದರು.

(ರೈತರ ಬಡ್ಡಿ ಮನ್ನಾ ಮಾಡಬೇಕು, ರೈತ ವಿರೋಧಿ ಸರ್ಕಾರಕ್ಕೆ ಧಿಕ್ಕಾರವೆಂದು ಕೂಗುತ್ತಿದ್ದರು)

ಸರ್ಕಾರ ನೀವು ಏನೇನು ಪ್ರಶ್ನೆಗಳನ್ನು ಕೇಳಿದ್ದೀರಿ ಎಲ್ಲದಕ್ಕೂ ಉತ್ತರ ಕೊಟ್ಟಿದೆ. ದಯವಿಟ್ಟು ಎಲ್ಲರೂ ನಿಮ್ಮ ನಿಮ್ಮ ಪೀಠಗಳಿಗೆ ಹೋಗಿ. ಈಗ ಸಭೆಯು ಮುಕ್ತಾಯವಾಗಿ ಸೋಮವಾರ ಬೆಳಿಗ್ಗೆ 10.30ಗಂಟೆಗೆ ಸೇರುತ್ತದೆ.

(ಸಭೆಯು ಮಧ್ಯಾಹ್ನ 2 ಗಂಟೆ 6 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 23 ಜುಲೈ ಮಾಹೆ 2001ರ ಸೋಮವಾರ ಬೆಳಿಗ್ಗೆ 10.30 ಕ್ಕೆ ಸೇರಲು ನಿಶ್ಚಯಿಸಲಾಯಿತು.)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

ಮುದ್ರಕರು: ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳು, ಸಶಾಮು. ತುಮಕೂರು, ಕಾಸೂ. 142 - 350 ಪುಸ್ತಕಗಳು ದಿ: 21-09-2002